ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2818/2019

ಚಾಸಾ:3 ಪ್ರಾಸಾ:3

ದಿನಾಂಕ: 12.03.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ದೇವಿ |
| ಗಂಡನ ಹೆಸರು | : | ಮಾದ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಹೆಮ್ಮಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

1ನೇ ಆರೋಪಿ ನನ್ನ ಅಳಿಯ, 2ನೇ ಆರೋಪಿ ಆತನ ಅಣ್ಣ, 3ನೇ ಆರೋಪಿ ಆತನ ಅತ್ತಿಗೆ, 4ನೇ ಆರೋಪಿ 1ನೇ ಆರೋಪಿಯ ಭಾವ.

1ನೇ ಆರೋಪಿಯೊಂದಿಗೆ ಪ್ರಾಸಾ-1ರವರ ವಿವಾಹ ನಿಶ್ಚಯವಾಗಿದ್ದು ಅವರು ಹೆಚ್ಚಿನ ವರದಕ್ಷಿಣೆಯನ್ನು ಬೇಡಿರುತ್ತಾರೆ. ಆದರೆ ನಾವು ರೂಪಾಯಿ 1 ಲಕ್ಷ ಮತ್ತು 9 ಪವನ್ ಚಿನ್ನವನ್ನು ನೀಡಲು ಒಪ್ಪಿ 1 ಲಕ್ಷ ವನ್ನು ಮೊದಲೇ ಕೊಟ್ಟು ಮದುವೆ ವೇಳೆಗೆ 9 ಪವನ್ ಚಿನ್ನ ನೀಡಿರುತ್ತೇವೆ. ಮದುವೆಯಾದ ನಂತರ ಸುಮಾರು 3 ತಿಂಗಳ ಕಾಲ 1ನೇ ಆರೋಪಿಯ ಮೂಲ ಮನೆಯಲ್ಲಿ ವಾಸವಾಗಿದ್ದು ಅನಂತರ ಬೆಳಗಾವಿಗೆ ಕರೆದುಕೊಂಡು 2 ತಿಂಗಳ ಕಾಲ ವಾಸವಾಗಿ ಅಲ್ಲಿ ಆಕೆಗೆ ಹೊಡೆದು ಬಡಿದು ಅನಂತರ ಪುನಃ ತನ್ನ ಅಣ್ಣನ ಮನೆಗೆ ಸೌಕೂರಿಗೆ ಕಳುಹಿಸಿರುತ್ತಾರೆ. ಅಲ್ಲಿ 2 ರಿಂದ 4ನೇ ಆರೋಪಿತರು ಆಕೆಯನ್ನು ಅವಾಚ್ಯವಾಗಿ ನಿಂಧಿಸಿ ವರದಕ್ಷಿಣೆಗಾಗಿ ಪುನಃ ಬೇಡಿಕೆ ಇಟ್ಟಿದ್ದು ಕಿರುಕುಳ ನೀಡುತ್ತಿದ್ದ ಮೇರೆಗೆ ವಾಪಸ್ಸು ಬೆಳಗಾವಿಗೆ ಕರೆದುಕೊಂಡು ಹೋಗಿ ಅಲ್ಲಿ ಆತನು ಅದೇ ರೀತಿ

ಹೊಡೆದು ಬಡಿದು ಅವಾಚ್ಯವಾಗಿ ನಿಂಧಿಸಿ ಬೆದರಿಕೆ ಹಾಕಿ ಅನಂತರ ನನ್ನ ಮಗನನ್ನು ಬಂದು ಕರೆದುಕೊಂಡು ಹೋಗು ಎಂದು ತಿಳಿಸಿರುತ್ತಾರೆ.

ಅನಂತರ ಎಷ್ಟು ಅವಧಿಯಾದರೂ ಆಕೆಯನ್ನು ಕರೆದುಕೊಂಡು ಹೋಗಿಲ್ಲ. ಈ ವಿಚಾರವಾಗಿ ನಾವು ಮಹಿಳಾ ಸಾಂತ್ವನ ಕೇಂದ್ರದಲ್ಲಿ ದೂರು ದಾಖಲಿಸಿರುತ್ತೇವೆ. ಹಣದೊಂದಿಗೆ 9 ಪವನ್ ಚಿನ್ನವನ್ನು ಮದುವೆ ವೇಳೆಗೆ ನೀಡಿದ್ದು ಅದನ್ನು 1ನೇ ಆರೋಪಿ ತೆಗೆದುಕೊಂಡು ಹೋಗಿರುತ್ತಾರೆ. ಈಗ ಪ್ರಾಸಾ-1ರವರು ತನ್ನ ಅಣ್ಣ ತಮ್ಮರೊಂದಿಗೆ ವಾಸವಾಗಿದ್ದು ಜೀವನ ನಡೆಸಲು ಕಷ್ಟಕರವಾಗಿರುತ್ತದೆ. ಈ ಎಲ್ಲಾ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಬಿ. ಆರ್.ಎನ್ ರವರಿಂದಃ</u>

ಮದುವೆಯ ಪ್ರಸ್ತಾಪವನ್ನು ನಮ್ಮ ಸಂಬಂಧಿಕರು ಮಾಡಿರುತ್ತಾರೆ. ಆತನ ವ್ಯವಹಾರ ಚೆನ್ನಾಗಿತ್ತು ಎಂದು ನಾವೇ ಒಪ್ಪಿರುತ್ತೇವೆ. ಆ ವಿಚಾರವನ್ನು ನನ್ನ ಸಂಬಂಧಿಕರು ಚಾಸಾ-2 ರವರಿಗೆ ತಿಳಿಸಿರುತ್ತಾರೆ. ಅದರಿಂದ ನನಗೆ ಈ ವಿಚಾರ ತಿಳಿದು ಬಂದಿರುತ್ತದೆ. ಪ್ರಾಸಾ-1ರವರು ಮದುವೆಯಾದ ನಂತರ ಸೌಕೂರಿನಲ್ಲಿ 3 ತಿಂಗಳು, ಬೆಳಗಾವಿಯಲ್ಲಿ 2-3 ತಿಂಗಳು ಇದ್ದರು. ನಾನು ಬೆಳಗಾವಿ ಮತ್ತು ಸೌಕೂರಿಗೆ ಹೋಗಿಲ್ಲ. ಹಿಂಸೆ ಕೊಟ್ಟ ಎಲ್ಲಾ ವಿಚಾರವನ್ನು ಪ್ರಾಸಾ-1ರವರು ತಿಳಿಸಿದ ಮೇಲೆ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ.

ರಾಜಿ ಪಂಚಾಯಿತಿಕೆ ಎಷ್ಟು ಬಾರಿ ನಡೆಸಿದ್ದಾರೆ ಎಂದು ನನಗೆ ತಿಳಿದಿಲ್ಲ. ಮದುವೆ ಖರ್ಚನ್ನು ಯಾರು ಹೇಗೆ ನಿಭಾಯಿಸಬೇಕು ಎಂದು ಮಾತುಕತೆಯಾದ ವಿಚಾರ ನನಗೆ ತಿಳಿದಿಲ್ಲ. 1ನೇ ಆರೋಪಿ ಹಾಕಿದ ಕರಿಮಣಿ ಮತ್ತು ಉಂಗುರ ಪ್ರಾಸಾ-1ರವರ ಬಳಿ ಇತ್ತು. ಅನಂತರ ಹಣಕಾಸಿನ ಅವಶ್ಯಕತೆಗಾಗಿ ಅದನ್ನು ಮಾರಿರುತ್ತಾರೆ. ನಾವು ಸಾಲ ಮಾಡಿರುವ ಬಗ್ಗೆ ದಾಖಲಾತಿಯನ್ನು ನಾನು ನೋಡಿಲ್ಲ. ಮದುವೆಯ ಖರ್ಚನ್ನು ಎರಡೂ ಪಕ್ಷದವರು ಭರಿಸಬೇಕು ಎಂದರೆ ಸರಿ. ಸಾಮಾನ್ಯವಾಗಿ ಹೆಣ್ಣಿನ ಮನೆಯವರು ಮದುವೆ ಖರ್ಚನ್ನು ಭರಿಸಿರುತ್ತಾರೆ ಎಂದರೆ ಸರಿ. ಸದ್ರಿ ಮದುವೆಯ ಖರ್ಚನ್ನು ವರದಕ್ಷಿಣೆ ಎಂದು ಬಿಂಬಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರಾಸಾ-1ರವರು ಹೇಳಿದ ಮಾಹಿತಿ ಮೇರೆಗೆ

ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವರದಕ್ಷಿಣೆ ಕಿರುಕುಳ ಎಂದು ಹೊಂದಾಣಿಕೆಯಲ್ಲಿ ಭಿನ್ನಾಭಿಪ್ರಾಯವನ್ನು ಇಟ್ಟು ಕೊಂಡು ಪ್ರತಿಪಾದಿಸಿದ್ದೇವೆ ಎಂದರೆ ಸರಿಯಲ್ಲ. ಇಬ್ಬರೂ ಒಪ್ಪಿಗೆ ಮೂಲಕ ವಿವಾಹ ವಿಚ್ಛೇಧನ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ.

ಮೇಲೆ ಹೇಳಿದ ಕೃತ್ಯವನ್ನು ಆರೋಪಿತರು ಎಸಗಿಲ್ಲ ಎಂದರೆ ಸರಿಯಲ್ಲ. ಪ್ರಾಸಾ-1ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಅಪಾದಿಸಿರುವ ಯಾವುದೇ ಕೃತ್ಯವನ್ನು ಎಸಗಿಲ್ಲ ಎಂದರೆ ಸರಿಯಲ್ಲ. ವರದಕ್ಷಿಣೆ ಬೇಡಿಕೆ ಇಟ್ಟು ಅದನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಹೊಡೆದು ಬೈದಿರುವ ಬಗ್ಗೆ ಈ ಹಿಂದೆ ಯಾವುದೇ ದೂರು ದಾಖಲಿಸಿಲ್ಲ. ಆರೋಪಿತರು ಯಾವುದೇ ಹಲ್ಲೆ ಮಾಡಿ ಪ್ರಾಸಾ-1ರವರು ಹಿಂಸಿಸಿದ ಕೃತ್ಯ ಎಸಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**